KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"
Pavate Nagar, Dharwad
ಪಾವಟೆನಗರ, ಧಾರವಾಡ
Fax No. 0837-2741928
Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2023/ 516 ದಿನಾಂಕ: 19/08/2023

## ಸುತ್ತೋಲೆ

ವಿಷಯ: ಸ್ನಾತಕೋತ್ತರ ಪದವಿಯ 2, 4, ಮತ್ತು 6 ನೇ ಸೆಮಿಸ್ಟರ್ ಕೋರ್ಸುಗಳ ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ: ಅಧಿಸೂಚನೆ ನಂ.ಕವಿವಿ/ಪರೀಕ್ಷಾ/ಜಿಎಡಿ/2023/508 ದಿನಾಂಕ:18/08/2023

*****

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಆಡಳಿತಾಧಿಕಾರಿಗಳು ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೆನೆಂದರೆ, ಉಲ್ಲೇಖಿತ ಅಧಿಸೂಚನೆಯ ಪ್ರಕಾರ ಸ್ನಾತಕೋತ್ತರ ಪದವಿಯ 2, 4 ಮತ್ತು 6 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ / ಪರೀಕ್ಷಾ ಶುಲ್ಕ ತುಂಬಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

UUCMS ತಂತ್ರಾಂಶದಲ್ಲಿ ಸ್ನಾತಕೋತ್ತರ 2 ನೇ ಸೆಮಿಸ್ಟರ್ ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿಯ ಶುಲ್ಕ ರೂ.100/–ಗಳು, ಕೊನೆಯ ಸೆಮಿಸ್ಟರ್ ಕೋರ್ಸುಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ರೂ.195/– ಹಾಗೂ ಪ್ರೋಜೆಕ್ಟ್ ವರ್ಕ/ಫಿಲ್ಡ್ ವರ್ಕ ಶುಲ್ಕ ರೂ.535/- ಗಳು ತಾಂತ್ರಿಕ ಕಾರಣಗಳಿಂದ UUCMS ತಂತ್ರಾಂಶದಲ್ಲಿ ಸೇರ್ಪಡೆಯಾಗಿರುವುದಿಲ್ಲ. ಕಾರಣ ಅಂತಹ ಸ್ನಾತಕೋತ್ತರ 2 ನೇ ಸೆಮಿಸ್ಟರ್ ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿಯ ಶುಲ್ಕ ರೂ.100/–, ಕೊನೆಯ ಸೆಮಿಸ್ಟರ್ ಕೋರ್ಸುಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ರೂ.195/- ಹಾಗೂ ಪ್ರೋಜೆಕ್ಟ ವರ್ಕ/ಫಿಲ್ಡ್ ವರ್ಕಗೆ ಸಂಬಂಧಪಟ್ಟ ಕೋರ್ಸುಗಳಿಗೆ ಅನ್ವಯವಾಗುವ ಶುಲ್ಕ ರೂ.535/- ಗಳನ್ನು ಪ್ರತ್ಯೇಕವಾಗಿ ಭರಿಸಿಕೊಂಡು, ಎಲ್ಲ ವಿದ್ಯಾರ್ಥಿಗಳ ಮೊತ್ತವನ್ನು ಕ್ರೋಢಿಕರಿಸಿ SBI Collect ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ಭರಿಸಲು ಸೂಚಿಸಲಾಗಿದೆ.

M.Com. 4 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.1,435/– (ಪ್ರೋಜೆಕ್ಟ್ ಶುಲ್ಕ ಸಹಿತ) ಇರುತ್ತದೆ. ಆದರೆ UUCMS ತಂತ್ರಾಂಶದಲ್ಲಿ ಪರೀಕ್ಷಾ ಶುಲ್ಕ ರೂ.735/– ಗಳು ಮಾತ್ರ ಇರುತ್ತದೆ. ಕಾರಣ, ವ್ಯತ್ಯಾಸದ ಮೊತ್ತ ರೂ.700/- ಗಳನ್ನು ಪ್ರತ್ಯೇಕವಾಗಿ ಭರಿಸಿಕೊಂಡು ಎಲ್ಲ ವಿದ್ಯಾರ್ಥಿಗಳ ಮೊತ್ತವನ್ನು ಕ್ರೋಢಿಕರಿಸಿ SBI Collect ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ಭರಿಸಲು ಸೂಚಿಸಲಾಗಿದೆ. ಸದರ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ. ಮುಂದುವರೆದು, ಈಗಾಗಲೇ ಹೊರಡಿಸಿದ ಅಧಿಸೂಚನೆಯನ್ವಯ ಕ್ರಮ ಜರುಗಿಸಲು ಸೂಚಿಸಲಾಗಿದೆ.

19/8/23

ಕುಲಸಚಿವರು(ಮೌಲ್ಯಮಾಪನ)

ಗೆ,

1) ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಆಡಳಿತಾಧಿಕಾರಿಗಳು, ಕ.ವಿ.ವಿ.ಧಾರವಾಡ,
2) ಆಡಳಿತಾಧಿಕಾರಿಗಳು, ಪಿಜಿ ಸೆಂಟರ್ ಗದಗ, ಹಾವೇರಿ, ಕಾರವಾರ.
3) ಕ.ವಿ.ವಿ.ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ./ಎಸ್‌ಸಿ/ಎಸ್‌ಟಿ/ಕೆ–1/ಒಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.